6	ಎಸ್.ಎಸ್.ಎಲ್.ಸಿ. ಉತ್ತೀರ್ಣ ಜೊತೆಗೆ 10 ವರ್ಷದ ಅನುಭವ	ರೂ.1563	ರೂ.1000	ರೂ.2563
7	ಅಂಗನವಾಡಿ ಸಹಾಯಕಿಯರು	ರೂ.750	ರೂ.500	ರೂ.1250
8	ಮಿನಿ ಅಂಗನವಾಡಿ ಕಾರ್ಯಕರ್ತೆಯರು	ರೂ.750	ರೂ.500	ರೂ.1250

ಆರ್.ಟಿ.ಓ. ಚೆಕ್ ಪೋಸ್ಟ್‌ಗಳಲ್ಲಿ ಧ್ವಜ ಮಾರಾಟ ಕುರಿತು

383 (946) ಡಾ.ಭಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ಆರ್.ಟಿ.ಓ. ಚೆಕ್‌ಪೋಸ್ಟ್‌ಗಳಲ್ಲಿ 01-06-2008 ರಿಂದ 31-12-2009 ರ ಅವಧಿಯಲ್ಲಿ ಎಷ್ಟು ಸೈನಿಕ ಧ್ವಜಗಳನ್ನು ಮಾರಾಟ ಮಾಡಲಾಗಿದೆ ಹಾಗೂ ಈ ಧ್ವಜಗಳ ಮಾರಾಟದಿಂದ ಸಂಗ್ರಹವಾದ ಹಣವೆಷ್ಟು? ಪ್ರತಿಯೊಂದು ಚೆಕ್‌ಪೋಸ್ಟ್‌ನ ಮಾಹಿತಿಯನ್ನು ಬೇರೆ ಬೇರೆಯಾಗಿ ನೀಡುವುದು;

ಆ) ಝಳಕಿ ಚೆಕ್‌ಪೋಸ್ಟ್‌ನಲ್ಲಿ ಒಂದೇ ದಿನದಲ್ಲಿ ಮೂರನೇ ಪಾಳಿಯಲ್ಲಿ ಸುಮಾರು ಎರಡೂವರೆ ಘಂಟೆಗಳಲ್ಲಿ 9700 ಮೌಲ್ಯದ ಸೈನಿಕ ಧ್ವಜ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ಅಶೋಕ (ಸಾರಿಗೆ ಸಚಿವರು) :

ಅ)

ತನಿಖಾ ಠಾಣೆಯ ಹೆಸರು	ಮಾರಾಟವಾದ ಧ್ವಜಗಳ ಸಂಖ್ಯೆ	ವಸೂಲಿಸಿದ ಧ್ವಜಗಳ ಮೊತ್ತ
ಅತ್ತಿಬೆಲೆ	2119	21,190
ನಂಗ್ಲಿ	740	10,200
ಬಾಗೇಪಲ್ಲಿ	740	10,200
ರಾಯಲ್ ಪಾಡ್	250	3,400

ಗೌರಿಬಿದನೂರು	250	3,400
ಹುಮನಾಬಾದ್	2000	20,000
ಆಳಂದ್	ಇಲ್ಲ	ಇಲ್ಲ
ಹಗರಿ	ಇಲ್ಲ	ಇಲ್ಲ
ಗುಂಡ್ಲುಪೇಟೆ	ಇಲ್ಲ	ಇಲ್ಲ
ಚಿಕ್ಕಹೊಳೆ	ಇಲ್ಲ	ಇಲ್ಲ
ಕಾಗವಾಡ	ಇಲ್ಲ	ಇಲ್ಲ
ರಾಮನಗರ	ಇಲ್ಲ	ಇಲ್ಲ
ನಿಪ್ಪಾಣಿ	2133	24,330
ಝಳಕಿ	ಇಲ್ಲ	ಇಲ್ಲ

ಆ) ಸೈನಿಕ ಧ್ವಜವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಯವರ ಆದೇಶದಂತೆ ಮಾರಾಟ ಮಾಡಲಾಗುತ್ತಿದೆ. ಇದು ರಾಜ್ಯ ಸರ್ಕಾರದ ಕಾರ್ಯಕ್ರಮ ಸಂಗ್ರಹವಾದ ಹಣವನ್ನು ಸೈನಿಕ ಕಲ್ಯಾಣ ಇಲಾಖೆಗೆ ನೀಡಲಾಗುತ್ತಿದೆ.

ಝಳಕಿ ಚೆಕ್‌ಪೋಸ್ಟ್‌ನಲ್ಲಿ ದಿನಾಂಕ: 1–1–2010 ರಿಂದ 10–01–2010ರ ಅವಧಿಯ 3 ನೇ ಪಾಳಿಯಲ್ಲಿ ರೂ.9,700 ಮೌಲ್ಯದ ಸೈನಿಕ ಧ್ವಜ ಮಾರಾಟವಾಗಿರುವ ಬಗ್ಗೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಝಳಕಿ ಇವರಿಂದ ವರದಿ ಬಂದಿದೆ.

384 (947) ಡಾ. ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1–6–2008 ರಿಂದ 31–12–2009ರ ಅವಧಿಯಲ್ಲಿ ಝಳಕಿ ಆರ್.ಟಿ.ಓ. ಚೆಕ್‌ಪೋಸ್ಟಿನಲ್ಲಿ ಕೆಳಗೆ ಕಾಣಿಸಿದ ವಿವಿಧ ಮಾದರಿಯ ವಾಹನಗಳಿಂದ ಸರ್ಕಾರಕ್ಕೆ ಸಂದಾಯವಾದ ಆದಾಯ ವೆಷ್ಟು?

1. ದ್ವಿಚಕ್ರ ವಾಹನಗಳು
2. ಕಾರು ಮತ್ತು ಜೀಪುಗಳು
3. ಟ್ರಾಕ್ಟರ್‌ಗಳು
4. 6 ಚಕ್ರಗಳ ಲಾರಿ ಟ್ರಕ್ ಗಾಡಿಗಳು